ಕರ್ನಾಟಕ ಸರ್ಕಾರ

ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು 560002

ಸಂಖ್ಯೆ: ಸಂ.ನೃ.ನಾ.ವಿ.ಕಾ-ರಾ.ನಾ.ಸ್ಪ/2018-19

ದಿನಾಂಕ:04/09/2018

ಗೆ,

ಪ್ರಾಂಶುಪಾಲರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,
ದಾವಣಗೆರೆ

ವಿಷಯ: 2018-19ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆ ಏರ್ಪಡಿಸುವ ಕುರಿತು.

ಉಲ್ಲೇಖ: ವಿ.ಐ.ಟಿ. ರವರ ಪತ್ರ ಸಂಖ್ಯೆ: ವಿ.ಎಂ.24[18]ಇಎಕ್ಸ್‌ಟಿ/ಎನ್.ಎಸ್.ಎಸ್.2018 ದಿನಾಂಕ: 07/06/2018

******

ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದ 34 ಡಯಟ್‌ಗಳ ವತಿಯಿಂದ 2018-19ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶಾಲಾ, ಬ್ಲಾಕ್, ಜಿಲ್ಲಾ ಹಂತದಲ್ಲಿ ವಿಜ್ಞಾನ ನಾಟಕ ಸ್ಪರ್ಧೆಯು ಪೂರ್ಣಗೊಂಡಿದೆ. ಜಿಲ್ಲಾ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳು, ವಿಭಾಗೀಯ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಸದರಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳಿಗೆ ರಾಜ್ಯ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯನ್ನು ಡಯಟ್ ದಾವಣಗೆರೆ ಇಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ.

ದಿನಾಂಕ: 23/11/2018 ರೊಳಗೆ ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ ಬೆಂಗಳೂರು, ಇವರು ದಕ್ಷಿಣ ವಲಯ ಮಟ್ಟದ ನಾಟಕ ಸ್ಪರ್ಧೆಯನ್ನು ಆಯೋಜಿಸಲಿದ್ದು, ರಾಜ್ಯ ಮಟ್ಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಎರಡು ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲಿವೆ. ಆದ್ದರಿಂದ ರಾಜ್ಯ ಹಂತದ ನಾಟಕ ಸ್ಪರ್ಧೆಯನ್ನು ದಿನಾಂಕ:28.10.2018 ರೊಳಗೆ ಆಯೋಜಿಸಬೇಕಿದ್ದು ಈ ಸಂಬಂಧ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವುದು.

**ರಾಜ್ಯ ಮಟ್ಟದ ಸ್ಪರ್ಧೆಗೆ ಮಾಡಿಕೊಳ್ಳಬೇಕಾದ ಅಗತ್ಯ ಸಿದ್ಧತೆಗಳು:**

**ವಿಜ್ಞಾನ ನಾಟಕವು ಈ ಕೆಳಕಂಡ ಯಾವುದಾದರೊಂದು ವಿಷಯಕ್ಕೆ ಸಂಬಂಧಿಸಿದಂತೆ ಇರಬೇಕು.**

| ❖ **Main Theme : Science and Society:** ವಿಜ್ಞಾನ ಮತ್ತು ಸಮಾಜ | | |
|---|---|---|
| Sub Themes: | 1 .Digital India: | ಡಿಜಿಟಲ್ ಭಾರತ |
| | 2.Cleanliness, Health and Hygiene | ಸ್ವಚ್ಛತೆ, ಆರೋಗ್ಯ ಮತ್ತು ನೈರ್ಮಲ್ಯ |
| | 3. Green ad clean Energy | ಹಸಿರು ಮತ್ತು ಶುದ್ಧ ಶಕ್ತಿ |
| | 4.Environmental conservation | ಪರಿಸರ ಸಂರಕ್ಷಣೆ |

1. ಉತ್ತಮ ಬೆಳಕು, ವಿದ್ಯುತ್/ಜನರೇಟರ್, ವೇದಿಕೆ, ಹೊಂದಿರುವ ಸಭಾಂಗಣದ ವ್ಯವಸ್ಥೆ.ರಾಜ್ಯದ 6 ವಿಭಾಗಗಳಿಂದ ಬಾಗವಹಿಸುತ್ತಿರುವ 48 ವಿದ್ಯಾರ್ಥಿಗಳು ಮತ್ತು 6 ಮಾರ್ಗದರ್ಶಿ ಶಿಕ್ಷಕರು ಒಟ್ಟು 54 ಜನಗಳಿಗೆ ಉತ್ತಮ ತಂಗುವ ವ್ಯವಸ್ಥೆ,

2. ತೀರ್ಪುಗಾರರ ಆಯ್ಕೆ: ನಾಟಕ ಕಲೆಯಲ್ಲಿ ಪರಿಣಿತಿ ಪಡೆದ , ವೈಜ್ಞಾನಿಕ ನಾಟಕವನ್ನು ಎಲ್ಲಾ ಆಯಾಮಗಳಲ್ಲಿ ವಿಶ್ಲೇಷಿಸಿ ತೀರ್ಪು ನೀಡುವ ಸಾಮರ್ಥ್ಯವಿರುವ ರಂಗಭೂಮಿಯ ತಜ್ಞರನ್ನು ತೀರ್ಪುಗಾರರನ್ನಾಗಿ ಆಯ್ಕೆ ಮಾಡಿಕೊಳ್ಳುವುದು.

3. ಎಲ್ಲಾ ನಾಟಕಗಳ ವೀಡಿಯೋ ಚಿತ್ರೀಕರಣಕ್ಕೆ ಹಾಗೂ ಫೋಟೋ ತೆಗೆಯಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವುದು.

<u>ನಾಟಕ ಸ್ಪರ್ಧೆಯ ನಿಯಮಗಳು ಕೆಳಕಂಡಂತಿದೆ.:-</u>

- **ಸ್ಪರ್ಧಿಗಳು:** 8 ರಿಂದ 10 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ನಿಯರು
- **ಸ್ಪರ್ಧಿಗಳ ಸಂಖ್ಯೆ:** ಒಂದು ತಂಡದಲ್ಲಿ ಗರಿಷ್ಠ 8 ಜನ (ವಾದಕರು, ಹಿನ್ನೆಲೆ ಗಾಯಕರು .. ಸೇರಿ)
- **ನಾಟಕದ ಅವಧಿ:** ಪ್ರತಿ ನಾಟಕಕ್ಕೆ 30 ನಿಮಿಷಗಳು.
- ನಾಟಕವು ನಿಗದಿಪಡಿಸಿರುವ ಮೈನ್ ಥೀಮ್ ಮತ್ತು ಸಬ್ ಥೀಮ್ ಹೊಂದಿದಂತೆ ವೈಜ್ಞಾನಿಕ ಸಂದೇಶವನ್ನು ಹೊಂದಿರಬೇಕು.
- ನಾಟಕ ಪ್ರದರ್ಶನವಾಗುತ್ತಿರುವ ಸಮಯದಲ್ಲಿ ವಿದ್ಯಾರ್ಥಿ/ನಿ ಯರೇ ಸಂಪೂರ್ಣವಾಗಿ ಎಲ್ಲಾ ಪ್ರಕ್ರಿಯೆಗಳಲ್ಲಿ ತೊಡಗಬೇಕು.
- ನಾಟಕವನ್ನು ಮಾನ್ಯತೆ ಪಡೆದ ಯಾವುದೇ ಭಾರತೀಯ ಪ್ರಸ್ತುತ ಪಡಿಸಬಹುದು.
- ಭಾಗವಹಿಸುತ್ತಿರುವ ಶಾಲೆಗಳು ನಾಟಕದ Script ನ್ನು ನಾಟಕ ಪ್ರದರ್ಶನದ ಮೊದಲು ತೀರ್ಪುಗಾರರಿಗೆ ಸಲ್ಲಿಸುವುದು. (3 ಪ್ರತಿಗಳು)

ಸ್ಪರ್ಧೆಯಲ್ಲಿ ಭಾಗವಹಿಸುವ ವಿಜ್ಞಾನ ನಾಟಕಗಳನ್ನು ಈ ಕೆಳಗಿನಂತೆ ಅಂಕಗಳನ್ನು ನೀಡಿ ನಿರ್ಣಯಿಸುವುದು. ಗರಿಷ್ಠ ಅಂಕಗಳು 100 ಆಗಿರುತ್ತದೆ.

| | | |
|---|---|---|
| ನಾಟಕದ ಪ್ರಸ್ತುತಿ. | Presentation of the drama | 50 ಅಂಕಗಳು |
| ನಾಟಕದಲ್ಲಿನ ವೈಜ್ಞಾನಿಕ ವಿಷಯ | Scientific content in the Drama | 30 ಅಂಕಗಳು |
| ನಾಟಕದ ಪರಿಣಾಮ | Effectiveness of the drama | 20 ಅಂಕಗಳು |

ರಾಜ್ಯ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯ ಆಯೋಜನೆಗಾಗಿ ರೂ. 50,000/- ಗಳ (ರೂ. ಐವತ್ತು ಸಾವಿರ ಮಾತ್ರ ) ಅನುದಾನವನ್ನು ನಿಗಧಿಪಡಿಸಲಾಗಿದೆ. ಈ ಮೊತ್ತವನ್ನು ಕೆಳಕಾಣಿಸಿದ ರೀತಿಯಲ್ಲಿ ನಿಯಾಮಾನುಸಾರ ವೆಚ್ಚ ಮಾಡಲು ಅನುಮತಿಸಿದೆ.

| ಕ್ರ.ಸ. | ವಿವರ | ಮೊತ್ತ |
|---|---|---|
| 1 | ಬಹುಮಾನ<br>ಪ್ರಥಮ - 1000*8=8000=00<br>ದ್ವಿತೀಯ - 800*8=6400=00<br>ತೃತೀಯ - 600*8=4800=00<br>ಸಮಾಧಾನಕರ – 150*8*3= 3600=00<br>ಉತ್ತಮ ನಿರ್ದೇಶಕ, ಉತ್ತಮ ನಾಟಕ ರಚನಕಾರರು, ಉತ್ತಮ ನಟ, ಉತ್ತಮ ನಟಿ, ತಲಾ ಒಂದರಂತೆ 4 ಬಹುಮಾನಗಳು ರೂ. 500/- ರಂತೆ | 8000=00<br>6400=00<br>4800=00<br>3600=00<br>2000=00<br>------------<br>**ರೂ. 24,800=00** |

| | | |
|---|---|---|
| 2 | ಟೈಮ್ ಕೀಪರ್ ಸಂಭಾವನೆ | ರೂ. 300=00 |
| 3 | ತೀರ್ಪುಗಾರರ ಸಂಭಾವನೆ (3ж1000)+ ಸಾರಿಗೆ ಭತ್ಯೆ (3 ж 250) | ರೂ. 3,750-00 |
| 4 | ಊಟ, ಉಪಹಾರ ಸ್ನ್ಯಾಕ್ಸ್ ಕಾಫೀ/ಟೀ (ಕಾರ್ಯಕ್ರಮದ ಹಿಂದಿನ ರಾತ್ರಿ ಮತ್ತು ಕಾರ್ಯಕ್ರಮದ ದಿನದಂದು. ವೇದಿಕೆ ,ಬೆಳಕಿನ ವ್ಯವಸ್ಥೆ,ಸಾದಿಲ್ವಾರು . ವೀಡಿಯೋ ಮತ್ತು ಛಾಯ ಚಿತ್ರೀಕರಣ,ತಂಗುವ ವ್ಯವಸ್ಥೆ. ಭಾಗವಹಿಸುವ ತಂಡಗಳು 8 ಸ್ಪರ್ಧಿಗಳಿಗೆ ಪ್ರಯಾಣ ಭತ್ಯೆ | ರೂ. 21,150-00 |
| | ಒಟ್ಟು | ರೂ 50,000-00 |

**ಕಾರ್ಯಕ್ರಮ ಮುಗಿದ ಕೂಡಲೇ ಈ ಕೆಳಕಂಡ ದಾಖಲೆಗಳನ್ನು ನಿರ್ದೇಶಕರು,(ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇಲ್ಲಿಗೆ ಒದಗಿಸುವುದು.**

ಪ್ರತಿಯನ್ನು ಇಮೇಲ್ secdirector.edu.sgkar@nic.in & sis.dsert-ka@nic.in ಮಾಡುವುದು.

1) ನೊಂದಣಿ ಪ್ರತಿ : ಜೆರಾಕ್ಸ್
2) ರಾಜ್ಯ ಹಂತದ ನಾಟಕ ಸ್ಪರ್ಧೆಯ ವರದಿ
3) ಎಲ್ಲಾ ನಾಟಕ ಗಳ ವೀಡಿಯೋ ಚಿತ್ರೀಕರಿಸಿದ ಡಿವಿಡಿ
4) ಪ್ರತಿ ನಾಟಕ ತಂಡದ ಫೋಟೋ (1 ಶಿಕ್ಷಕರು ಮತ್ತು ವಿದ್ಯಾರ್ಥಿಗಳಿರುವ ಗ್ರೂಪ್ ಫೋಟೋ ಮತ್ತು ನಾಟಕ ತಂಡದವರು ಅಭಿನಯಿಸುತ್ತಿರುವ ಸಂದರ್ಭದಲ್ಲಿ ತೆಗೆದ ಫೋಟೋ)
4) ತೀರ್ಪುಗಾರರ ವಿವರಗಳು – ನಮೂನೆಯಲ್ಲಿರುವಂತೆ.
5) ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ಪ್ರಥಮ ಮತ್ತು ದ್ವಿತೀಯ ತಂಡದ ವಿವರಗಳು ದೂರವಾಣಿ ಸಂಖ್ಯೆ ಯೊಂದಿಗೆ –ನಮೂನೆಯಲ್ಲಿರುವಂತೆ

ನಿರ್ದೇಶಕರು,(ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಯನ್ನು:
1] ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ.
2] ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ನೃಪತುಂಗ ರಸ್ತೆ, ಬೆಂಗಳೂರು.
3] ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಧಾರವಾಡ
4] ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು
5] ನಿರ್ದೇಶಕರು, ಪ್ರಾಥಮಿಕ/ಪ್ರೌಢ/ಅಲ್ಪ ಸಂಖ್ಯಾತ ಭಾಷಾ ಶಾಲೆಗಳು, ಬೆಂಗಳೂರು.
4] ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಗುಲ್ಬರ್ಗ/ಬೆಳಗಾಂ
5] ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕಾಗಿ.
6] ಸಂಯೋಜಕರು, ವಿ.ಐ.ಟಿ.ಎಂ. ಅಂಚೆ ಪೆಟ್ಟಿಗೆ ಸಂಖ್ಯೆ: 5216, ಕಸ್ತೂರಬಾ ರಸ್ತೆ, ಬೆಂಗಳೂರು-1 ಇವರಿಗೆ ಮಾಹಿತಿಗಾಗಿ.